ಮಾನ್ಯ ಸಂಪಾದಕರು,
ಲಂಕೇಶ ಪತ್ರಿಕೆ,
ಬಸವನಗುಡಿ, ಬೆಂಗಳೂರು ಇವರ ಸನ್ನಿಧಿಗೆ,

ಉತ್ತರ ಕನ್ನಡ ಜಿಲ್ಲಾ ಸಿರ್ಸಿ ತಾಲ್ಲೂಕ ವಾನಹಳ್ಳಿ ಹಾಗೂ ಕಕ್ಕಳ್ಳಿ ಗ್ರಾಮದ ನಾಗರಿಕರು ಬರಕೊಂಡ ವಿನಂತಿ ದೂರು.

ಮಾನ್ಯರೇ,

ವಿಷಯ:— ಅರಣ್ಯಪಾಲಕ ಗುರುವಳ್ಳಿ ಶಾಖೆ ವಾನಹಳ್ಳಿ ಇವರು
ಮಾಡಿರುವ ಅರಣ್ಯ ಲೂಟಿ ಹಾಗೂ ಸರ್ಕಾರದ ಹಣ
ದುರುಪಯೋಗ ಕುರಿತು.

ಂ ಂ ಂ ಂ

ಈ ಹಿಂದೆ ನಮ್ಮ ವಾನಳ್ಳಿ ಕಕ್ಕಳ್ಳಿ ಗ್ರಾಮದ ಜಂಗಲ್‌ದಲ್ಲಿ (ವಾನಳ್ಳಿ, ಕಕ್ಕಳ್ಳಿ ಪಿ.ಡಬ್ಲ್ಯು.ಡಿ. ರೋಡ ಅಜೂ–ಬಾಜು) ಅನೇಕ ವರ್ಷಗಳಿಂದ ಬೆಳೆದು ನಿಂತಿದ್ದ ಬೇರೆ ಬೇರೆ ಜಾತಿಯ ಬೆಲೆ ಬಾಳುವ ಗಿಡ–ಮರಗಳನ್ನು ಕಡಿಸಿ ಅವುಗಳನ್ನು ಅಧಿಕೃತ ಪರವಾನಗಿ ಇಲ್ಲದೇ ಕಳ್ಳಸಾಗಾಣಿಕೆ ಮಾಡುವವರಿದ್ದಾರೆ. ಸ್ಥಳಿಕರಲ್ಲಿ ವಿಚಾರಿಸಲಾಗಿ ಶ್ರೀ ನರವಿಂದ ಜೋಕಪ್ಪ ಫರ್ನಾಂಡಿಸ ಸಾ: ಹುಲೇಕಲ ಇವರು ಕಡಿಸಿದ್ದು ಎಂತಾ ಹೇಳುತ್ತಾರೆ. ಈ ಗುನ್ಹೆ ಬಗ್ಗೆ ಯಾವುದೇ ಪ್ರಕರಣ ಮಾಡಿದ್ದು ಇರುವುದಿಲ್ಲಾ. ಶ್ರೀ ನರಸಿಂದ ಜೋತಪ್ಪ ಫರ್ನಾಂಡಿಸ ಸಾ: ಹುಲೇಕಲ ಇವರಿಗೆ ವಿಚಾರಿಸಲಾಗಿ ಅಲ್ಲಿ ನಡೆದ ಗುನ್ಹೆಗೂ ನನಗೂ ಏನೂ ಸಂಬಂಧವಿಲ್ಲಾ ಎಂತಾ ಹೇಳಿಕೆ ಕೊಟ್ಟಿದ್ದಾರೆ. ಆ ಜಂಗಲ್‌ದಲ್ಲಿ ಕಡಿದು ಹಾಕಿದ ಗಿಡ–ಮರಗಳ ಸಂಖ್ಯೆ ಅಜಮಾಸ 250 ರಿಂದ 300 ಗಿಡಗಳು ಆಗಬಹುದು, ಆ ಗಿಡಗಳಿಂದ ಹೊರಡಬಹುದಾದ ನಾಟುಗಳು ಹಾಗೂ ಜಲಾವ ಇನ್ನೂ ಸ್ಥಳದಲ್ಲಿ ಬಿದ್ದಿವೆ. ಇಷ್ಟರಲ್ಲಿ ಪರಾರಿ ಮಾಡುವ ಸಂಬವವಿದೆ. ಅರಣ್ಯಪಾಲಕ ಗುರುವಳ್ಳಿ ಶ್ರೀ ಜಿ. ಎನ್. ಪರವಾರ ಈ ಕೆಲಸಗಳನ್ನು ಮಾಡಿಸಿದ್ದಾರೆ. ಸಿರ್ಸಿ–ಡಿಫಓ ಇವರು ಅವರಿಗೆ ಶಾಮೀಲ್ ಆಗಿದ್ದಾರೆ. ಈ ಹಿಂದೆ ನಮ್ಮ ಗ್ರಾಮದಲ್ಲಿ ಸಾಗವಾನಿ ಮರಗಳನ್ನು ಕಡಿಸಿ ಚಿರಾವ ಮಾಡಿಸಿ ಸಿರ್ಸಿ–ಡಿ.ಎಫ್.ಓ. ಇವರಿಗೆ ಮೈಸೂರಿನಲ್ಲಿ ಕಟ್ಟುತ್ತಿರುವ ಹೊಸ ಮನೆಗೆ ಕಳ್ಳತನದಿಂದ ಸಾಗಾಟ ಮಾಡಿಸಿದ್ದಾರೆ. ಈ ಬಗ್ಗೆ ಮೇಲಾಧಿಕಾರಿಯವರಿಗೆ ದೂರು ಸಲ್ಲಿಸಿದರೂ ಅವರು ಯಾವುದೇ ತರಹದ ಕ್ರಮ ಕೈಗೊಡಿದ್ದು ಇರುವುದಿಲ್ಲ.

2. ನಮ್ಮ ಗ್ರಾಮದ ವಾಸಿ ಶ್ರೀ ರಾಮಸುಬ್ರಾಯ ಭಟ್ಟ ಸಾ: ಕಕ್ಕಳ್ಳಿ ಇವರು ದಿನಾಂಕ 7–5–83 ರಂದು ಕಕ್ಕಳ್ಳಿ ಜಂಗಲ್‌ದಲ್ಲಿ 1 ನಂದಿ ಮರ ಕಡಿದು 1 ನಾಟ ತಯಾರಿಸಿದ್ದು ಬಗ್ಗೆ ಶ್ರೀ ಜೆ.ಎನ್. ಪರವಾರ ಫಾರೆಸ್ಟರ್ ಇವರು ಪ್ರಕರಣ ದಾಖಲ ಮಾಡಿ ಸದ್ರಿ ಗುನ್ಹೆಗಾರರ ಕಡೆಯಿಂದ ಗುನ್ಹೆ ಬಧ್ರತೆ ಡಿಪಾಜಿಟ ಹಣ 500–00 ರೂಪಾಯಿಯನ್ನು ಶ್ರೀ ಕೃಷ್ಣ ನಾರಾಯಣ ಹೆಗಡೆ ಸಾ: ಕಕ್ಕಳ್ಳಿ ಪಂಚಾಯಿತ ಚೇರಮನ್ ಇವರ ಸಮಕ್ಷಮ ಹಣ ಪಡೆದುಕೊಂಡಿದ್ದು ಇದ್ದು, ಆ ಹಣವನ್ನು ಸರಕಾರಕ್ಕೆ ಜಮಾ ಮಾಡದೇ ಹಣ ದುರುಪಯೋಗ ಮಾಡಿದ್ದಾರೆ, ಅಲ್ಲದೆ 500–00 ರೂ. ಹಣ ಕೊಟ್ಟ ಬಗ್ಗೆ ಪಾವತಿ ನಂಬರ–58487:3:83–84 ದಿನಾಂಕ   –5–83 ನನಗೆ ಮುಟ್ಟಿತು ಎಂತಾ ಪಾವತಿ ಬರೆದು ಸಹಿಯನ್ನು ಪಡೆದಿದ್ದಾರೆ.

ಆ ಪಾವ್ತಿ ನಕಲು ಇದರ ಸಂಗಡ ಲಗ್ತು ಇಟ್ಟಿದೆ. ''ಸರ್ಕಾರದ ಹಣ ದುರುಪಯೋಗ ಪಡಿಸಿದ್ದಕ್ಕೆ ಶಿಕ್ಷೆ ಆಗಬೇಕು'' ಮೇಲಾಧಿಕಾರಿಗಳ ಹಾಗೂ ಸಿ.ಬಿ.ಐ. ತನಿಖೆ ಆಗಬೇಕು. ಯಾವುದೇ ಅಧಿಕಾರಿಗಳು ಗುರುವಳ್ಳಿಗೆ ಬಂದು ಅರಣ್ಯಪಾಲಕರ ಕಾಗದ ಪತ್ರಗಳು ತನಿಖೆ ಮಾಡಿದರೆ ತಿಳಿಯುತ್ತದೆ. ಈ ಬಗ್ಗೆ ಸಾಕ್ಷಿ ಆಧಾರಗಳು ಇವೆ.

ಸದರಿ ವಿಷಯವನ್ನು ಮುಚ್ಚುಮರೆಯಿಲ್ಲದೆ, ಸಾರ್ವಜನಿಕರಿಗೆ ಆಗುವ ತೊಂದರೆಯನ್ನು ಪ್ರಕಟಿಸಬೇಕಾಗಿ ತಮ್ಮಲ್ಲಿ ವಿನಂತಿ.

ಇಂತಿ,

ತಾರೀಖ:- 22-12-83.

ಕಕ್ಕಳ್ಳಿ, ಮಾನಹಳ್ಳಿ
ಗ್ರಾಮದವರ ಕಡೆಯಿಂದ

(ಶ್ರೀ. ಕೃಷ್ಣನಾರಾಯಣ ಹೆಗಡ)
ಪಂಚಾಯತ್ ಚೇರಮನ್
ಕಕ್ಕಳ್ಳಿ.

1) ವಿಜಿಲೆನ್ಸ ಕಮಿಷನರ್, ಬೆಂಗಳೂರು ಇವರಿಗೆ,
   ಯಥಾನಕಲು, ಮಾನ್ಯ ಮುಖ್ಯಮಂತ್ರಿ ಇವರಿಗೆ ರವಾನಾ.
2) ಚೀಫ್ ಕನ್ಸರವೇಟರ ಆಫ್ ಫಾರೆಸ್ಟ (ಜನರಲ್) ಬೆಂಗಳೂರು ಇವರಿಗೆ ರವಾನಾ.
3) ಯಥಾನಕಲು ಕನ್ಸರವೇಟರ್ ಆಫ್ ಫಾರೆಸ್ಟ ಕೆನರಾ ಸರ್ಕಲ್, ಧಾರವಾಡ ಇವರಿಗೆ, ಈ ಅರ್ಜಿಯಲ್ಲಿ ಅಡಕವಾದ ವಿಷಯವನ್ನು ತಾವೇ ಸ್ವತ: ಗುರುವಳ್ಳಿಗೆ ಬಂದು ಕಾಗದ ಪತ್ರ ತನಿಖೆ ಮಾಡಿದರೆ ಎಲ್ಲಾ ತಿಳಿಯುತ್ತದೆ. ನಂತರ ಮುಂದಿನ ಕ್ರಮ ಕೈಗೊಳ್ಳುವರೇ ಅಡ್ಡಿಇಲ್ಲಾ.